ನನ್ನ ಓದು

# ಮಾನವೀಯ ಜಗತ್ತಿನೆಡೆಗಿನ ತೋರುಗೈ ರೂಪದ ಕಥೆಗಳು



**ರವಿಕುಮಾರ್ ನೀಹ**

ಕನ್ನಡದ ಪ್ರಮುಖ ಕಥೆಗಾರ್ತಿಯರಲ್ಲಿ ಒಬ್ಬರಾದ ಬಿ.ಟಿ. ಜಾಹ್ನವಿಯವರು ಎಂಬತ್ತರ ದಶಕದಲ್ಲಿಯೇ ಕಥೆಗಳ ಮೂಲಕ ಬರವಣಿಗೆಗೆ ಪ್ರವೇಶ ಮಾಡಿದವರು. ಲಂಕೇಶರ 'ಪತ್ರಿಕೆ ಪ್ರಕಾಶನ'ದಿಂದ 'ಕಳೆದುಕೊಂಡವಳು ಹಾಗೂ ಇತರ ಕತೆಗಳು' ಕೃತಿ ಪ್ರಕಟಿಸಿದರು. ಮೂರೂವರೆ ದಶಕದಿಂದ ಈವರೆಗೆ ಅವರು ಬರೆದಿರುವುದು ಇಪ್ಪತ್ತೊಂಬತ್ತು ಕತೆಗಳಷ್ಟೇ. ಒಂದೆರಡು ಕಥೆಗಳನ್ನು ಬಿಟ್ಟರೇ ಉಳಿದವು ಓದುಗರಿಗೆ ತಲುಪಿಲ್ಲ. ಪ್ರಮುಖ ಪ್ರಕಾಶನದಿಂದ ಪುಸ್ತಕ ಪ್ರಕಟಗೊಂಡಿದ್ದರೂ ಚರ್ಚೆಗಳಾಗಿಲ್ಲ. ಇದಕ್ಕೆ ಸಾಮೂಹಿಕ ಉದಾಸೀನ ಕಾರಣವಿರಬಹುದು. ಈಗ 'ಕೌದಿ' ಪ್ರಕಾಶನ ಪ್ರಕಟಿಸಿರುವ 'ಒಬ್ರು ಸುದ್ಯಾಕೆ... ಒಬ್ರು ಗದ್ಲ್ಯಾಕೆ...' ಜಾಹ್ನವಿಯವರಿಗೆ ಮೊದಲ ಕಥಾಸಂಕಲನದ ಸಂಭ್ರಮ ಹುಟ್ಟಿಸಿದೆ.

ಈ ಸಂಕಲನದ ಕಥೆಗಳು ಮಹಿಳೆ, ದಲಿತ, ಆಧುನಿಕ ಸಂಕಟಗಳು, ಭಾವುಕತೆ, ಮಾನವೀಯತೆ ಎಲ್ಲವುಗಳ ಸಂಕೀರ್ಣ ಮಿಶ್ರಣ. ಮೂರೂವರೆ ದಶಕದಲ್ಲಿ ಕನ್ನಡದ ಕಥನ ಪರಂಪರೆ ಸಾಗಿರುವ ಒಳದಾರಿಯೂ ಈ ಸಂಕಲನದೊಳಗೆ ಕಾಣುತ್ತದೆ. ಕಥೆಗಾರ್ತಿ ತನ್ನೆದುರಿಗಿನ ಸಮಾಜಕ್ಕೆ ಪ್ರತಿಕ್ರಿಯಾತ್ಮಕವಾಗಿ ಇಲ್ಲಿ ಮುಖಾಮುಖಿಯಾಗಿದ್ದಾರೆ. ವಸ್ತು ಮತ್ತು ಅದರ ನಿರ್ವಹಣೆಯಲ್ಲಿ ನವೀನ ಎನಿಸಬಹುದಾದ ತಂತ್ರಗಾರಿಕೆಯಿದೆ, ಪ್ರಯೋಗಶೀಲತೆಯಿದೆ. ಅದಷ್ಟೇ ಅಲ್ಲ, ತಮ್ಮ ಕಾಲದ ಸಂಕಟಗಳನ್ನು ಸಮಕಾಲೀನ ಬದುಕುಗಳ ಜೊತೆಯಲ್ಲಿಯೇ ಎದುರುಗೊಂಡಿದ್ದಾರೆ. ಮಹಿಳೆ, ದಲಿತ ಬದುಕನ್ನು ಒಟ್ಟಿಗೆ ಹಿಡಿದಿಡುವ ಕಥನಗಳಾಗಿ ಇವು ನಮ್ಮ ಮುಂದಿವೆ. ದಲಿತ ಮತ್ತು ಮಹಿಳಾ ಪರವಾದ